**ಸಿ.ಸಿ. ನಂಃ 540/2023**

**ಪಿ.ಡಬ್ಲ್ಯೂಃ 1**

**ದಿನಾಂಕ 13.08.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ: ಶ್ರೀ. ಕೆ.ಎಸ್.ಡಿ.ವಕೀಲರಿಂದಃ**

1. ಸುಮಾರು 9 ವರ್ಷಗಳಿಂದ ನನಗೆ ಆರೋಪಿಯ ಪರಿಚಯ ಇರುತ್ತದೆ. ಆರೋಪಿಯು ಅಡಕೆ ವ್ಯಾಪಾರಕ್ಕಾಗಿ ನಮ್ಮ ಊರಿಗೆ ಬರುತ್ತಿದ್ದಾಗ ನನಗೆ ಆರೋಪಿಯ ಪರಿಚಯವಾಗಿರುತ್ತದೆ. ನನ್ನ ಅಡಕೆ ತೋಟದಿಂದ ಆರೋಪಿಯು ಎಂದಿಗೂ ಸಹ ಅಡಕೆ ಖರೀದಿಸಿರುವುದಿಲ್ಲ.

2. ಈಗ 5-6 ವರ್ಷಗಳ ಹಿಂದೆ ಆರೋಪಿಯ ವಿವಾಹವಾಗಿರುತ್ತದೆ. ನಾನು ಆರೋಪಿಯ ಮದುವೆಗೆ ಹೋಗಿರುವುದಿಲ್ಲ ಆದರೆ ಕರ್ನೇರೆ ಸಮಾರಂಭಕ್ಕೆ ಹರದನಹಳ್ಳಿ ಗ್ರಾಮಕ್ಕೆ ಹೋಗಿದ್ದೆ. ಹರದನಹಳ್ಳಿ ಗ್ರಾಮದಲ್ಲಿರುವ ಆರೋಪಿಯ ಆರ್.ಸಿ.ಸಿ ಮನೆಯಲ್ಲಿ ಕರ್ನೇರೆ ಸಮಾರಂಭವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹರದನಹಳ್ಳಿಯ ಚತ್ರದಲ್ಲಿ ಆರೋಪಿಯ ಕರ್ನೇರೆ ಸಮಾರಂಭವಾಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

3. ನಾನು ಆರೋಪಿಗೆ ಸಾಲ ನೀಡಿದಾಗ ಆರೋಪಿಯು ಕೆ ಆರ್ ನಗರ ತಾಲ್ಲೂಕಿನಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದು, ಕೆ ಆರ್ ನಗರದ ಯಾವ ಶಾಲೆಯಲ್ಲಿ ಆರೋಪಿಯು ಆಗ ಶಿಕ್ಷಕನಾಗಿದ್ದರು ಎಂದು ನನಗೆ ಗೊತ್ತಿಲ್ಲ. ತಮ್ಮ ಅಡಕೆ ವ್ಯಾಪಾರ ನಡೆಸುವ ಉದ್ದೇಶಕ್ಕಾಗಿ ಹಣದ ಅವಶ್ಯಕತೆ ಇದೆ ಎಂದು ಹೇಳಿ ಆರೋಪಿಯು ನನ್ನಿಂದ ಸಾಲವನ್ನು ಪಡೆದಿದ್ದರು. ತಮ್ಮ ಅಡಕೆ ವ್ಯಾಪಾರ ನಡೆಸುವ ಉದ್ದೇಶಕ್ಕಾಗಿ ಆರೋಪಿಯು ನನ್ನಿಂದ ಸಾಲವನ್ನು ಪಡೆದಿದ್ದರು ಎಂದು ನಾನು ನಿಪಿ.3 ರ ನೋಟಿಸು ಮತ್ತು ಪಿರ್ಯಾದಿಯಲ್ಲಿ ಹೇಳಿರುವುದಿಲ್ಲ. ಸದರಿ ವಿಷಯವನ್ನು ನಿಪಿ.3 ರ ನೋಟಿಸು ಮತ್ತು ಪಿರ್ಯಾದಿಯಲ್ಲಿ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ.

4. ನಾನು ಆರೋಪಿಗೆ ಸಾಲ ಕೊಡುವ ಒಂದು ತಿಂಗಳ ಹಿಂದೆ ಆರೋಪಿಯು ತಮಗೆ 5 ಲಕ್ಷ ರೂಪಾಯಿ ಸಾಲ ಬೇಕು ಎಂದು ನನ್ನಲ್ಲಿ ಕೇಳಿದ್ದರು. ದಿನಾಂಕ 06.11.2022 ರಂದು 5 ಲಕ್ಷ ರೂಪಾಯಿ ಹಣವು ನನ್ನ ಬ್ಯಾಂಕ್ ನಲ್ಲಿ ಇರಲಿಲ್ಲ ಬದಲಾಗಿ ನನ್ನ ಮನೆಯಲ್ಲಿಯೇ ಇತ್ತು. ನಾನು ಹತ್ತನೇಯ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನಾನು ಆಂಗ್ಲ ಭಾಷೆಯಲ್ಲಿಯೇ ನನ್ನ ಸಹಿ ಮಾಡುತ್ತೇನೆ ಎಂದರೆ ಸರಿ. ನಿಪಿ.1 ರಲ್ಲಿರುವ ಬರವಣಿಗೆಗಳನ್ನು ಆರೋಪಿಯೇ ಬರೆದಿರುತ್ತಾರೆ. ನಿಪಿ.1 ರಲ್ಲಿ ಇರುವ ಆರೋಪಿಯ ಸಹಿಗೂ ಮತ್ತು ನಿಪಿ.1 ರಲ್ಲಿರುವ ಇತರೆ ಬರವಣಿಗೆಗಳಿಗೂ ವ್ಯತ್ಯಾಸವಿದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಹೇಳಲು ಆಗುವುದಿಲ್ಲ ಆದರೆ ನಿಪಿ.1 ರ ಚೆಕ್ಕನ್ನು ಆರೋಪಿಯೇ ಬರೆದು ತಮ್ಮ ಸಹಿ ಹಾಕಿ ನನಗೆ ಕೊಟ್ಟಿರುತ್ತಾರೆ ಎಂದು ಸಾಕ್ಷಿಯು ಸ್ವತಃ ನುಡಿದಿರುತ್ತಾರೆ.

5. ಸಾಲವನ್ನು ಪಡೆಯುವ ದಿನದಂದು ಆರೋಪಿಯು ಒಬ್ಬರೇ ಬಂದಿದ್ದರು. 8 ರಿಂದ 9 ತಿಂಗಳುಗಳ ಒಳಗಾಗಿ ಸಾಲವನ್ನು ನನಗೆ ಮರುಪಾವತಿ ಮಾಡುವುದಾಗಿ ಒಪ್ಪಿ ಆರೋಪಿಯು ನನ್ನಿಂದ ಸಾಲವನ್ನು ಪಡೆದಿರುತ್ತಾರೆ. ನನಗೆ ಆರೋಪಿಯ ಪರಿಚಯ ಆದಾಗಿನಿಂದಲೂ ಆರೋಪಿಗೆ ಸಾಲ ನೀಡುವವರೆಗೂ ನನ್ನ ಮತ್ತು ಆರೋಪಿಯ ಮಧ್ಯೆ ಒಳ್ಳೆಯ ಸಂಬಂಧ ಇತ್ತು. ಸಾಲ ಪಡೆದ 8-9 ತಿಂಗಳುಗಳ ಒಳಗಾಗಿ ಆರೋಪಿಯು ನನಗೆ ಸಾಲ ಮರುಪಾವತಿ ಮಾಡಿರುವುದಿಲ್ಲ. ನಾನು ಆರೋಪಿಗೆ ಸಾಲ ಕೊಟ್ಟ ದಿನದಿಂದ 9 ತಿಂಗಳುಗಳವರೆಗೆ ಆರೋಪಿಯು ಎಂದಿಗೂ ಸಹ ನನಗೆ ಮುಖಾ-ಮುಖಿಯಾಗಿ ಬೇಟಿಯಾಗಿರುವುದಿಲ್ಲ.

6. ನನ್ನ ಮೊಬೈಲ್ ಸಂಖ್ಯೆ 9448908977 ಅಂತ ಇರುತ್ತದೆ ಎಂದರೆ ಸರಿ. 9 ವರ್ಷಗಳ ಹಿಂದೆ ಆರೋಪಿ ನಿಮಗೆ ಪರಿಚಯವಾದ ದಿನದಿಂದ ನೀವು ಆರೋಪಿಗೆ ಸಾಲ ಕೊಡುವವರೆಗೂ ಹಾಗೂ ಆರೋಪಿಗೆ ಸಾಲ ಕೊಟ್ಟ ನಂತರ ಇಂದಿನವರೆಗೂ ಎಂದಾದರೂ ನಿಮ್ಮ ಮೊಬೈಲ್ ಸಂಖ್ಯೆ 9448908977 ರಿಂದ ಆರೋಪಿಯ ಮೊಬೈಲ್ ನಂಬರಿಗೆ ಕರೆ ಮಾಡಿದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಆರೋಪಿಗೆ ಸಾಲ ಕೊಟ್ಟ ನಂತರ ಒಂದು ಸಲ ನನ್ನ ಸದರಿ ನಂಬರಿನಿಂದ ಆರೋಪಿಯ ಮೊಬೈಲ್ ನಂಬರಿಗೆ ಕರೆ ಮಾಡಿದ್ದು, ಆರೋಪಿಯು ನನ್ನ ಕರೆಯನ್ನು ತೆಗೆದಿರಲಿಲ್ಲ.

ನನಗೆ ಆರೋಪಿಯ ಮೊಬೈಲ್ ನಂಬರ್ ಗೊತ್ತಿಲ್ಲ. ಆರೋಪಿಯು 8073261398 ಹಾಗೂ 9741203381 ಇವೆರಡು ನಂಬರುಗಳನ್ನು ಸುಮಾರು 10-15 ವರ್ಷಗಳಿಂದ ಉಪಯೋಗಿಸುತ್ತಿದ್ದು, ಆರೋಪಿಯ ಸದರಿ ನಂಬರುಗಳಿಗೆ ನಾನು ಎಂದಿಗೂ ಸಹ ಕರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಆರೋಪಿಯ ಮೊಬೈಲ್ ನಂಬರಿಗೆ ಕರೆ ಮಾಡಿದ್ದು, ಅದರ ಬಗ್ಗೆ ಕಾಲ್ ಲಾಗ್ ಹಾಜರುಪಡಿಸಬಲ್ಲೆ ಎಂದು ಸ್ವತಃ ನುಡಿದಿರುತ್ತಾರೆ.

**ಆರೋಪಿಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು.,ಕೆ.ಆರ್.ನಗರ**